ಇಲಾಖೆಯಲ್ಲಿ ಮೈಕ್ರೋ ಫಿಲಂ ಘಟಕವನ್ನು ಸ್ಥಾಪನೆ ಮಾಡಿದ್ದು, ಇದರಿಂದ ಸರ್ವೆ ದಾಖಲೆಗಳನ್ನು ರಕ್ಷಿಸಿಡಲಾಗುವುದು.

ಹಣದ ಲಭ್ಯತೆ ಅನುಸರಿಸಿ ಪುನರ್-ಸರ್ವೆ ಕಾರ್ಯವನ್ನು ಹಂತ -ಹಂತವಾಗಿ ಕೈಕೊಳ್ಳಲಾಗುವುದು.

ವಿಷಯ:-ರಾಜ್ಯದಲ್ಲಿ ಜಿಲ್ಲಾಪರಿಷತ್. ಮಂಡಲ ಪಂಚಾಯತ್ ಕ್ಷೇತ್ರಗಳ ಪುನರ್ ವಿಂಗಡಣೆಯ ಪ್ರಸ್ತಾವನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೧೨:- (೬೩೫)

ಶ್ರೀ.ಹೆಚ್.ಎಂ. ರೇವಣ್ಣ (ಮಾಗಡಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ ಮಂಡಲ ಪಂಚಾಯತಿ ಕ್ಷೇತ್ರಗಳನ್ನು ಪುನರ್ ವಿಂಗಡಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದೆ?

ಆ) ಹಾಗಿದ್ದಲ್ಲಿ, ಪುನರ್ ವಿಂಗಡಣೆ ಮಾಡುವಾಗ ಅನುಸರಿಸಿದ ವಿಧಾನಗಳಾವುವು?

ಇ) ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಶೇಕಡಾ ಎಷ್ಟು ಕ್ಷೇತ್ರಗಳನ್ನು ಮೀಸಲಿಡಲಾಗುವುದು? ಹಾಗೂ ಅವುಗಳು ಯಾವುವು?

ಈ) ಈ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

೭೩ನೇ ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕೃತವಾಗಿರುವುದರಿಂದ ಒಂದು ಸಮಗ್ರ ತಿದ್ದುಪಡಿ ಕಾಯಿದೆಯನ್ನು ತರಲಾಗುತ್ತಿದೆ. ಅದರ ಪ್ರಕಾರ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಅದಕ್ಕೆ ಸಂಬಂಧಪಟ್ಟ ಕ್ರಮಗಳನ್ನು ಕೈಗೊಳ್ಳಲಾಗುವುದು.

ವಿಷಯ:- ಮಳೆ ಮತ್ತು ನೆರೆ ಹಾವಳಿಗೆ ತುತ್ತಾದ ಜಮೀನುಗಳಿಗೆ ಕೊಟ್ಟ ಪರಿಹಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೧೩:- (೬೨೪)

ಡಾ: ವೈ. ನಾಗಪ್ಪ(ಹರಿಹರ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಿಹರ ತಾಲ್ಲೂಕಿನಲ್ಲಿ ನವೆಂಬರ್ ೧೭,೧೮,೧೯-೧೯೯೨ರಲ್ಲಿ ಆದ ಮಳೆ ಮತ್ತು ನೆರೆ ಹಾವಳಿಗೆ ತುತ್ತಾಗಿ ಎಷ್ಟು ಹೆಕ್ಟೇರ್ ಜಮೀನಲ್ಲಿ ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಗಿರುವುದು ಹಾಗೂ ಇದರ ಬಗ್ಗೆ ತೆಗೆದುಕೊಂಡ ಕ್ರಮ ಏನು?

ಆ) ಅದಕ್ಕಾಗಿ, ಯಾವ ರೀತಿಯಲ್ಲಿ ಪರಿಹಾರ ಕೊಡಲಾಗಿದೆ?

ಇ) ಎಷ್ಟು ಜನ ಸಣ್ಣ ರೈತರು ಮತ್ತು ಅತೀ ಸಣ್ಣ ರೈತರು ಈ ಅನಾಹುತಕ್ಕೆ ಸಿಕ್ಕಿ-ಕೊಂಡಿರುವರು (ಸಂಖ್ಯೆ ರೂಪದಲ್ಲಿ ವಿವರ ಕೊಡುವುದು)

ಶ್ರೀ ಎಂ.ರಾಜಶೇಖರ ಮೂರ್ತಿ
(ಕಂದಾಯ ಸಚಿವರು.)

ಹರಿಹರ ತಾಲ್ಲೂಕಿನಲ್ಲಿ ಸುಮಾರು ೧೪೭೭.೪೦ ಹೆಕ್ಟೇರ್ ಪ್ರದೇಶ ನೆರೆ ಹಾವಳಿಗೆ ತುತ್ತಾಗಿ ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಗಿರುವುದು. ಈ ಬಗ್ಗೆ ಜಿಲ್ಲಾಧಿಕಾರಿ, ಚಿತ್ರದುರ್ಗ ಮತ್ತು ಮುಖ್ಯಕಾರ್ಯದರ್ಶಿ, ಜಿಲ್ಲಾಪರಿಷತ್ತು, ಚಿತ್ರದುರ್ಗ ಇವರುಗಳು